**ಸಾಕ್ಷಿಯನ್ನು ದಿನಾಂಕಃ 27-09-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ನಾನು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ವಾದಿಗೆ ಅಸ್ತಮ ಹಾಗೂ ಬಿಪಿ ಇರುವುದು, ಅವರು ಆರೋಗ್ಯದಿಂದ ಇರುವವರು ಎಂದರೆ ಸರಿಯಲ್ಲ. ಅವರು ಸಾಕ್ಷಿ ಹೇಳಲು ಸಮರ್ಥರಿರುವವರು ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿದ ವ್ಯವಹಾರ ನಡೆದಾಗ ನಾನು ಹಾಜರಿರಲಿಲ್ಲ. ಖರೀದಿ ವ್ಯವಹಾರ ನಡೆದಾಗ ವಾದಿ ಎಷ್ಟು ಮೌಲ್ಯಕ್ಕೆ ದಾವಾ ಸ್ವತ್ತನ್ನು ಕೇಳಿದರು ಮತ್ತು ಪ್ರತಿವಾದಿ ಎಷ್ಟಕ್ಕೆ ಒಪ್ಪಿದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಾಗ ಅದು ಹಾಲಪ್ಪ ಇವರ ಹೆಸರಿನಲ್ಲಿ ಇತ್ತು. ಖರೀದಿ ಮಾಡುವ ಕಾಲಕ್ಕೆ ಹಾಲಪ್ಪರವರ ಹೆಸರಿನಲ್ಲಿ ಇದ್ದ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಖರೀದಿಯ ಕಾಲಕ್ಕೆ ಹಾಲಪ್ಪನ ಒಬ್ಬನ ಹೆಸರಿನಲ್ಲಿ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿಯ ಕಾಲಕ್ಕೆ ದಾವಾ ಸ್ವತ್ತಿನ ಪಹಣಿಯನ್ನು ನೋಡಿರುವುದಿಲ್ಲ. ಸರ್ವೇ ನಂ.106 ಇದು ಖರೀದಿ ಪತ್ರದಡಿಯಲ್ಲಿ ಖರೀದಿಯಾಗಿರುತ್ತದೆ. ಸರ್ವೇ ನಂ. 106 ರ ಬದಲಾಗಿ 100 ಜಿ ಎಂದು ತಪ್ಪಾಗಿ ನಮೂದಾಗಲು ಕಾರಣವೇನೆಂದರೆ ಬೆರಳಚ್ಚು ತಪ್ಪಿನಿಂದಾಗಿರಬಹುದು. ಸರ್ವೇ ನಂ. 100 ಜಿ ಬದಲಾಗಿ ಬೇರೆಯಾವುದಾದರೂ ಸರ್ವೇ ನಂಬರ್ ಉಲ್ಲೇಖ ಆಗಬಹುದಿತ್ತಲ್ಲ ಎಂದರೆ ಬೆರಳಚ್ಚು ಕಾರಣದಿಂದ 100 ಜಿ ಯಾಗಿರುತ್ತದೆ. ಖರೀದಿಯ ಕಾಲಕ್ಕೆ 106 ಕ್ಕೆ ಸಂಬಂಧಿಸಿದ ಪಹಣಿಯನ್ನು ನೀಡಿರುವರು. ಸರ್ವೇ ನಂ. 106 ಇದರ ವಿಸ್ತೀರ್ಣ 8 ಎಕರೆ ಇತ್ತು.

ಸದರಿ 8 ಎಕರೆ ಜಮೀನು ಹಾಲಪ್ಪನ ಹೆಸರಿನಲ್ಲಿತ್ತು. ಆ ಸಮಯದಲ್ಲಿ 8 ಎಕರೆ ಹಾಲಪ್ಪನ ಹೆಸರಿನಲ್ಲಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತು ನಮ್ಮ ಸ್ವಾಧೀನದಲ್ಲಿರುವುದು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ. ಕಂದಾಯವನ್ನು ಕಟ್ಟಲು 1983 ರಲ್ಲಿ ಹೋಗಿದ್ದೇವೆ ಆಗ ಸರ್ವೇ ನಂಬರ್ ತಪ್ಪಾಗಿರುವುದು ಗೊತ್ತಾಗಿರುತ್ತದೆ, ನಂತರ 1990 ರಲ್ಲಿ ಹೋಗಿದ್ದೇವೆ ಆಗಲೂ ಅದೇ ಕಾರಣಕ್ಕೆ ಕಂದಾಯವನ್ನು ಕಟ್ಟಲು ಸಾಧ್ಯವಾಗಿರುವುದಿಲ್ಲ. 1983 ನೇ ಇಸವಿಯಲ್ಲಿ ಸರ್ವೇ ನಂಬರ್ ತಪ್ಪಾಗಿರುವ ಕಾರಣ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಕಾರಣ ನನ್ನ ಅಜ್ಜಿ ಮತ್ತು ತಂದೆ ಆ ಕಾಲಕ್ಕೆ ಅನಕ್ಷರಸ್ಥರಾಗಿದ್ದರು.

ಸದರಿ ಖರೀದಿ ಪತ್ರಕ್ಕೆ ಗವಿಸಿದ್ದಪ್ಪ ಮತ್ತು ಬಸಪ್ಪರವರು ಸಾಕ್ಷಿದಾರರಾಗಿ ಸಹಿ ಮಾಡಿರುವರು. ಅವರು ಉಚ್ಚಂಗಿದುರ್ಗಾ ಗ್ರಾಮದವರು. 1983 ರಲ್ಲಿ ಸಾಕ್ಷಿದಾರರನ್ನು ಸರ್ವೇ ನಂಬರ್ ತಪ್ಪಾದ ವಿಚಾರದ ಕುರಿತು ವಿಚಾರಿಸಿದ್ದೇವೆ. ಖರೀದಿ ಪತ್ರವು 100 ಜಿ ಸರ್ವೇ ನಂಬರ್ ಗೆ ಸಂಬಂಧಿಸಿದಂತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನಾಗಲೀ , ನನ್ನ ತಂದೆಯವರಾಗಲೀ ಸರ್ವೇ ನಂ. 106 ರ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ 42 ವರ್ಷ ವಯಸ್ಸಾಗಿರುವುದು. ಖರೀದಿ ಪತ್ರವಾದಾಗ ನಾನು ಜನಿಸಿರಲಿಲ್ಲ ಎಂದರೆ ಸರಿ. ಕರಿಯಪ್ಪ ಯಾವುದೇ ಖರೀದಿ ಪತ್ರವನ್ನು ಸರ್ವೇ ನಂ. 106 ಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

27.09.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**